**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಒ.ಎಸ್ ನಂಬರಃ 163/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಹಾಂತಸ್ವಾಮಿ ಪ್ಯಾಟಿಮಠ | ಡಿ. ಡಬ್ಲ್ಯೂ | 01 |
| ತಂದೆಯ ಹೆಸರು | ರೇವಣಸಿದ್ದಯ್ಯ | | |
| ವಯಸ್ಸು | 58 ವರ್ಷ | | |
| ಉದ್ಯೋಗ | ವ್ಯವಸ್ಥಾಪಕರು, ಕಾರ್ಡಮಮ್ ಮರ್ಚಂಟ ಕೋ-ಆಪರೇಟಿವ ಬ್ಯಾಂಕ ಹಾವೇರಿ | | |
| ವಾಸಸ್ಥಳ | ಹಾವೇರಿ. | | |

**ದಿಃ21.03.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಶ್ರೀ ಎಸ್.ಹೆಚ್.ಬಿ ವಕೀಲರಿಂದಃ 1 ನೇ ಪ್ರತಿವಾದಿಯ ಪರವಾಗಿಃ**

**1)** ಕಳೆದ 35 ವರ್ಷಗಳಿಂದ ಕಾರ್ಡಮಮ್ ಮರ್ಚಂಟ ಕೋ-ಆಪರೇಟಿವ ಬ್ಯಾಂಕ ಹಾವೇರಿಯಲ್ಲಿ ಕಿರಿಯ ಸಹಾಯಕ, ಹಿರಿಯ ಸಹಾಯಕ, ಸಹಾಯಕ ಲೆಕ್ಕಾಧಿಕಾರಿ ಮತ್ತು ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನ್ಯಾಯಾಲಯದ ಆದೇಶದಂತೆ ಈ ದಿನ ವಿಭಾಗ ಪತ್ರ ದಿನಾಂಕಃ 22.11.2001 ರ ವಿಭಾಗ ಪತ್ರ ಮತ್ತು ದಿನಾಂಕಃ 10.06.2016 ರ ಅಡಮಾನ ಪತ್ರವನ್ನು ಹಾಜರುಪಡಿಸಿದ್ದೇನೆ. ವಿಭಾಗ ಪತ್ರವು ದಿನಾಂಕಃ 23.11.2001 ರಂದು ನೊಂದಣಿಯಾಗಿರುತ್ತದೆ. ಮಹ್ಮದಯೂಸೂಫ ಜಮಾಲಸಾಬ ಪಟವೇಗಾರ ಮತ್ತು ಅಬ್ದುಲ್‌ವಹಾಬ ಜಮಾಲಸಾಬ ಪಟವೇಗಾರವರು ಮಾಡಿಕೊಂಡಿರುವ ನೊಂದಣಿ ವಿಭಾಗ ಪತ್ರವನ್ನು ಗುರುತಿಸಿದ್ದು, ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಅಬ್ದುಲ್‌ವಹಾಬ ತಂದೆ ಜಮಾಲಸಾಬ ಪಟವೇಗಾರರವರು ಬ್ಯಾಂಕಿಗೆ ಬರೆದುಕೊಟ್ಟಿರುವ ಅಡಮಾನ ಪತ್ರವನ್ನು ಗುರುತಿಸಿದ್ದು, ಅದನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಸದರಿ ಅಬ್ದುಲ್‌ವಹಾಬರವರು ರೂ.10,00,000/- ಸಾಲವನ್ನು ಪಡೆದು ತನ್ನ ಪಾಲಿನ ಆಸ್ತಿಯನ್ನು ಅಡಮಾನ ಮಾಡಿದ್ದಾರೆ.

**2)** ಅಬ್ದುಲ್‌ವಹಾಬರವರು ಮೂಲ ವಿಭಾಗ ಪತ್ರವನ್ನು ಸಾಲದ ಅರ್ಜಿಯೊಂದಿಗೆ ಹಾಜರುಪಡಿಸಿ ಸಾಲ ಪಡೆದು ಅಡಮಾನ ಪತ್ರವನ್ನು ಬರೆದುಕೊಟ್ಟಿದ್ದಾರೆ. ಸಾಲ ಮಂಜೂರು ಮಾಡುವ ಮೊದಲು ದಾಖಲೆಗಳನ್ನು

ಪರಿಶೀಲಿಸಿ ವಕೀಲರಿಂದ ವರದಿಯನ್ನು ಪಡೆಯುತ್ತೇನೆ. ಸಾಲ ಸಂಪೂರ್ಣವಾಗಿ ಮರುಪಾವತಿ ಮಾಡಿಲ್ಲ, ಇನ್ನೂ ಬಾಕಿ ಇದೆ. ಪ್ರತಿ ತಿಂಗಳ ಕಂತುಗಳನ್ನು ಸರಿಯಾಗಿ ಪಾವತಿ ಮಾಡಿರುವದಿಲ್ಲ.

**ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ.ಎ.ಎ.ಕೆ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇರುವದಿಲ್ಲ. ಆದ್ದರಿಂದ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ. ಇದೆ.
ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ., ಹಾವೇರಿ.